[Govt. of Karnataka C.R.P. 67]

| Deposition Sheets (RP.No.57) Form No.4 (Civil) | OF CIVIL JUDGE & J.M.F.C., KARKALA. |
|---|---|

Criminal Case No. 1392/2020

................................................Vs...................................

ಸಾಕ್ಷಿದಾರನ ಹೆಸರು ಃ ಚಂದ್ರಕಾಂತ ನಾಯಕ್

ತಂದೆಯ ಹೆಸರುಃ ದಾಮೋದರ ನಾಯಕ್ ಪಿ.ಡಬ್ಲ್ಯೂಃ 2

ಪ್ರಾಯ ಃ 59 ವರ್ಷ

ಉದ್ಯೋಗ ಃ ಮುಖ್ಯ ಪೇದೆ. ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆ

ವಾಸ ಃ ಹಿರ್ಗಾನ, ಕಾರ್ಕಳ

ದಿನಾಂಕ 22.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ದಂ ಪ್ರ ಸಂ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆಃ

ನಾನು 2023 ರಿಂದ ಇಲ್ಲಿಯವರೆಗೆ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮಾನ್ಯ ನ್ಯಾಯಾಲಯದ ಸಿಸಿ ನಂ. 1392/2020 ರಲ್ಲಿ ನ್ಯಾಯಾಲಯದ ಆದೇಶದಂತೆ ಇಸ್ತಿಯಾರ್ ಪ್ರಕಟಣೆ ಬಗ್ಗೆ ಇಸ್ತಿಯಾರ್ ಆರೋಪಿ ಶ್ರೀ ಮೊಹಮ್ಮದ್ ಜಾವೇದ್ , ವಾಸ ಷಾರ್ಜಾ ಟವರ್ , ಅಬ್ಬಸ್ ಹಾಜಿ ಕಾಂಪೌಂಡು, ಬಂದರ್ ಮಂಗಳೂರು ಇವರಿಗೆ ಇಸ್ತಿಯಾರ್ ಜಾರಿ ಮಾಡುವಂತೆ ಆದೇಶ ಇದ್ದ ಪ್ರಕಾರ ನಾನು ದಿಃ 16.10.2024 ರಂದು ಇಸ್ತಿಯಾರ್ ನಲ್ಲಿ ನಮೂದಿಸಿದ ಸ್ಥಳಕ್ಕೆ ಹೋದಾಗ ಅಂಗಡಿ ಮುಚ್ಚಿತ್ತು. ಸದ್ರಿ ಇಸ್ತಿಯಾರ್ ನ ಒಂದು ಪ್ರತಿಯನ್ನು ಅಂಗಡಿಗೆ ಅಂಟಿಸಿರುತ್ತೇನೆ. ಅಲ್ಲಿಂದ ಹೊರಟು ಮಂಗಳೂರು ಬಸ್ಸು ನಿಲ್ದಾಣಕ್ಕೆ ಮತ್ತು ರಿಕ್ಷಾ ನಿಲ್ದಾಣಕ್ಕೆ ಬಂದು ಪಂಚರ ಸಮಕ್ಷಮ ಏರು ಧ್ವನಿಯಲ್ಲಿ ಇಸ್ತಿಯಾರ್ ನ್ನು ಓದಿ ಹೇಳಿದ್ದು ನಂತರ ಒಂದು ಪ್ರತಿಯನ್ನು ಮಂಗಳೂಾರು ಬಸ್ಸು ನಿಲ್ದಾಣ ಹಾಗೂ ರಿಕ್ಷಾ ನಿಲ್ದಾಣಕ್ಕೆ, ಮಂಗಳೂರು ನಗರ ಪಾಲಿಗೆಯ ನೋಟಿಸು ಬೋರ್ಡ್ ಗೆ ಹಾಗೂ

ಇನ್ನೊಂದು ಪ್ರತಿಯನ್ನು ಮಂಗಳೂರು ನ್ಯಾಯಾಲಯದ ನೋಟಿಸ್ ಬೋರ್ಡ್ ನಲ್ಲಿ ಅಂಟಿಸಿ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸಿರುತ್ತೇನೆ.

ಈ ಮಹಜರನ್ನು ಪಂಚರ ಸಮಕ್ಷಮ ದಿಃ16.10.2024 ರಂದು ಸಂಜೆ 14.000 ರಿಂದ 16.00 ಗಂಟೆಯವರೆಗೆ ಮಂಗಳೂರು ಬಸ್ಸು ನಿಲ್ದಾಣ ಪರಿಸರದಲ್ಲಿ ಮಹಜರು ನಡೆಸಿರುತ್ತೇನೆ. ಅದೇ ರೀತಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ.

ನ್ಯಾಯಾಲಯದಿಂದ ನೀಡಿದ ಘೋಷಣಾ ವಾರೆಂಟನ್ನು ನಿಪಿ-6 ಎಂದು, ಇಸ್ತಿಯಾರ್ ಮಹಜರನ್ನು ನಿಪಿ-7 ಎಂದು, ನನ್ನ ಸಹಿ ನಿಪಿ-7 ರಲ್ಲಿ ಇದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಮೇಲಾಧಿಕಾರಿಯವರಿಗೆ ವರದಿಯನ್ನು ನೀಡಿರುತ್ತೇನೆ.

ಆರೋಪಿಯು ತಲೆಮರೆಸಿಕೊಂಡಿದ್ದು, ಪಾಟೀ ಸವಾಲು ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ